ವಿಷಯ :- ಚಿಕ್ಕೋಡಿ ತಾಲ್ಲೂಕಿನ ಸದಲಗಾ ಮತ್ತು ಕ್ಷೇತ್ರದಲ್ಲಿ ಕೊರಿಸಲಾದ ಕೊಳವೆ ಬಾವಿಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 204 (1351)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಸದಲಗಾ) :- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994-95 ಮತ್ತು 1995-96 ನೇ ಸಾಲಿನಲ್ಲಿ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಚಿಕ್ಕೋಡಿ ತಾಲ್ಲೂಕಿನ ಸದಲಗಾ ಮತ ಕ್ಷೇತ್ರದಲ್ಲಿ ಕೊರೆಸಲಾದ ಕೊಳವೆ ಬಾವಿಗಳ ಸಂಖ್ಯೆಗಳೆಷ್ಟು? (ಹಳ್ಳಿಗಳ ಹೆಸರುಗಳನ್ನು ಸ್ಥಳಗಳೊಂದಿಗೆ ಸೂಚಿಸುವುದು)

ಆ) ಇವುಗಳಲ್ಲಿ ಸಫಲವಾಗಿರುವ ಕೊಳವೆಬಾವಿಗಳು ಸಂಖ್ಯೆ ಎಷ್ಟು? ಮತ್ತು ವಿಫಲವಾಗಿರುವ ಕೊಳವೆಬಾವಿಗಳ ಸಂಖ್ಯೆ ಎಷ್ಟು? ಇವುಗಳ ಆಳವೆಷ್ಟು?

ಇ) ಸಫಲವಾದ ಕೊಳವೆ ಬಾವಿಗಳಿಂದ ಗ್ರಾಮಗಳ ಜನರು ಯಾವ ಯಾವ ವಿಧಾನದಿಂದ ಈ ನೀರನ್ನು ಬಳಸಿಕೊಳ್ಳುತ್ತಿದ್ದಾರೆ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು):-

ಅ) ಚಿಕ್ಕೋಡಿ ತಾಲ್ಲೂಕಿನ ಸದಲಗಾ ಮತ ಕ್ಷೇತ್ರದಲ್ಲಿ ಕೊರೆಯಿಸಿದ ಕೊಳವೆ ಬಾವಿಗಳ ವಿವರ ಕೆಳಕಂಡಂತಿರುತ್ತದೆ.

	ಕೊರೆದಿರುವ ಕೊಳವೆಬಾವಿಗಳ ಸಂಖ್ಯೆ
1994-95	5
1995-96	37 (ಹಳ್ಳಿಗಳ ಹೆಸರು ಮತ್ತು ಸ್ಥಳಗಳನ್ನು ಅನುಬಂಧ (1) ರಲ್ಲಿ ನೀಡಿದೆ.

ಆ) ಸಫಲವಾಗಿರುವ ಕೊಳವೆ ಬಾವಿಗಳು 40

ವಿಫಲವಾದ ಕೊಳವೆ ಬಾವಿಗಳು 02
(ಅನುಬಂಧ-1 ರಲ್ಲಿ ಆಳವನ್ನು ಪ್ರತ್ಯೇಕವಾಗಿ ನೀಡಿದೆ).

ಇ) ಸಫಲವಾದ ಕೊಳವೆಬಾವಿಗಳಲ್ಲಿ 34 ಕೊಳವೆಬಾವಿಗಳಿಗೆ ಕೈಪಂಪುಗಳನ್ನು ಜೋಡಿಸಲಾಗಿದೆ. ಒಂದು ಕೊಳವೆ ಬಾವಿಯ ಜಲಮೂಲವನ್ನು ಕಿರುನೀರು ಸರಬರಾಜಿಗೆ ಒಂದು ಹಾಗೂ 5 ಕೊಳವೆಬಾವಿಗಳ ಜಲಮೂಲವನ್ನು ಕೊಳವೆ ನೀರು ಸರಬರಾಜು ಯೋಜನೆಗೆ ಬಳಸಿ ಗ್ರಾಮಗಳ ಜನರಿಗೆ ಕುಡಿಯುವ ನೀರನ್ನು ಒದಗಿಸಲಾಗಿದೆ.

ಅನುಬಂಧ-I

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1351 ರ ಲಗತ್ತು.

1994-95 ನೇ ಸಾಲಿನಲ್ಲಿ ಕೊರೆಯಲಾದ ಕೊಳವೆಬಾವಿಗಳು

ಕ್ರಮ ಸಂಖ್ಯೆ	ಸಡಲಗಾ ಮತಕ್ಷೇತ್ರದಲ್ಲಿ ಬರುವ ಹಳ್ಳಿಗಳ ಹೆಸರು	ಆಳ ಮತ್ತು (ಮೀಟರ್‌ಗಳಲ್ಲಿ)	ಸಫಲ : ವಿಫಲ
1.	ಸನದಿ (ವಿಠಲ ಮಂದಿರ ಎದುರು)	97	ಸಫಲ
2.	ಯೆಡ್ಯಾನವದಿ (ಸಡಲಗಾ ರಸ್ತೆ ಎಡಬಂದಿಗೆ)	91	ಸಫಲ
3.	ಬೋರಗಾಂಡ (ಮಾದರ ತೋಟ)	78	ಸಫಲ
4.	ಅಪ್ಪಾಜಿವಾಡಿ (ಹಳ್ಳದಲ್ಲಿ)	61	ಸಫಲ
5.	ಬೋರಗಾಂವ (ಮಾಧ್ಯಮಿಕ ಶಾಲೆ)	190	ಸಫಲ

1995-96 ನೇ ಸಾಲಿನಲ್ಲಿ ಕೊರೆಯಲಾದ ಕೊಳವೆಬಾವಿಗಳು

1.	ಕಸನಾಳ (ಶಾಲೆ ಹತ್ತಿರ)	122	ಸಫಲ
2.	ನನಡಿವಾಡಿ (ನಾಲೆಯ ಪಶ್ಚಿಮಕ್ಕೆ)	158	ಸಫಲ
3.	ನನಡಿವಾಡಿ (ಕುಂಬಾರ ಹೊಲ)	140	ಸಫಲ
4.	ಇಂಗಳಿ (ಮೊರ್ಚಿ ಕಾಲನಿ)	219	ಸಫಲ
5.	ಚಂದಾರ ಟೀಕ (ಟೀಕ್)	214	ಸಫಲ
6.	ಯಡೂರ (ಬಸ್ ಸ್ಟ್ಯಾಂಡ್ ಸರ್ಕಲ್)	209	ಸಫಲ
7.	ಕಲ್ಲೊಳ (ಗಾಂಧಿನಗರ)	6	ಸಫಲ
8.	ಕಲ್ಲೊಳ (ಅಗಸಿ)	122	ಸಫಲ
9.	ನನದಿ (ಹೆಗ್ಗಣ್ಣವರ ಕೋಡಿಹಳ್ಳಿ)	122	ಸಫಲ
10.	ಹಾರದಗಾ (ಹರಿಜನಕೇರಿ)	91.5	ಸಫಲ
11.	ಡೋನೇವಾಡಿ (ಹಳ್ಳದಲ್ಲಿ)	91.5	ಸಫಲ
12.	ಡೋನೋವಾಡಿ (ಹಳೇ ಕೈಪಂಪ್ ಹತ್ತಿರ)	163	ಸಫಲ
13.	ಬಾರವಾಡ (ವಿಠಲ ಮಂದಿರದ ರಸ್ತೆ)	42.5	ಸಫಲ
14.	ಸಿದ್ನಾಳ (ಹಳ್ಳದ ಹತ್ತಿರ)	147	ಸಫಲ
15.	ಸಿದ್ನಾಳ (ಹರಿಜನ ಕೇರಿ)	92	ಸಫಲ
16.	ಕಸನಾಳ (ಕೆರೆ ಹಿಂದೆ)	123	ಸಫಲ

17. ಎಕ್ಸಂಬಾ (ಹಳ್ಳದಲ್ಲಿ) (ಟೀಚರ್ಸ್ ಕಾ.)	87.5	ಸಫಲ
18. ಗಳತಗಾ (ಹಳ್ಳದಲ್ಲಿ) (ಅಗಸಿ)	140	ಸಫಲ
19. ಎಕ್ಸಂಬಾ (ಉಳಾಳಗಡ್ಡಿವಾಡಿ ಕ್ರಾಸ್)	182	ಸಫಲ
20. ಎಕ್ಸಂಬಾ (ಕಾರ್ಖಾನೆ ಹತ್ತಿರ)	237	ಸಫಲ
21. ಎಕ್ಸಂಬಾ (ದರ್ಗಾ ಎದುರು)	122	ಸಫಲ
22. ಎಕ್ಸಂಬಾ (ತಾಲೀಮಕಟ್ಟೆ)	150	ಸಫಲ
23. ಬೀಡಕಿ ಹಾಳ (ಅರ್ಬನ್ ಬ್ಯಾಂಕ್)	150	ಸಫಲ
24. ಬೀಡಕಿ ಹಾಳ (ಕುರಬರಗಲ್ಲಿ)	150	ಸಫಲ
25. ಗಳತಗಾ (ಕಿರವಾಳ್ ಮನೆ ಎದುರು)	160	ಸಫಲ
26. ಶಮನೇವಾಡಿ	110	ಸಫಲ
27. ಬಿಡಕೀಹಾಳ (ನೂರೇಗಲ್ಲಿ)	150	ಸಫಲ
28. ಬಿಡಕೀ ಹಾಳ (ಕೆರೆಹತ್ತಿರ)	148	ಸಫಲ
29. ನನದಿವಾಡಿ	190	ಸಫಲ
30. ಮಮದಾಪುರ ಕೆ. ಎಲ್. (ಹಳೇ ಮಮದಾಪುರ)	159	ಸಫಲ
31. ಎಕ್ಕೆಂಬಾ (ಕರ್ನಾಟಕ ಕೋಡಿ)	147	ಸಫಲ
32. ಕಲ್ಲೋಳ (ಮಹಾಂತೇಶನಗರ)	137	ಸಫಲ
33. ಬೋರಂಗಾವ (ವಡ್ಡರಮಾಳ)	146	ಸಫಲ
34. ಬೋರಂಗಾವ್ (ಮಗದುಮ್ಮ ತೋಟ)	150	ಸಫಲ
35. ಗಳತಾಗ (ಈಗಿದ್ದ ಶಾಲೆ)	145	ಸಫಲ
36. ನೇಜ (ಈಗಿದ್ದ ಶಾಲೆ)	148	ಸಫಲ
37. ನನದಿ (ಹೆಗ್ಗನ್ನವರ ಕೋಡಿ)	158	ಸಫಲ

11-40 ಎ. ಎಂ.

+ **ಶ್ರೀ ಪ್ರಕಾಶ್ ಬಿ. ಹುಕ್ಕೇರಿ** :- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂಥ ಪ್ರಶ್ನೆಗೆ ಉತ್ತರವಾಗಿ ಚಿಕ್ಕೋಡಿ ತಾಲ್ಲೂಕಿನ ಸಡಲಗಾ ಮತಕ್ಷೇತ್ರದಲ್ಲಿ 1994-95 ರಲ್ಲಿ 5 ಕೊಳವೆ ಬಾವಿಗಳನ್ನು ಹಾಗೂ 1995-96 ನೇ ಸಾಲಿನಲ್ಲಿ 37 ಕೊಳವೆ ಬಾವಿಗಳನ್ನು ಕೊರೆಸಲಾಗಿದೆಯೆಂದು ತಿಳಿಸಿದ್ದಾರೆ. ಒಂದೊಂದು ಹಳ್ಳಿಯಲ್ಲೂ 4-5 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದ್ದು 1994-95 ರಲ್ಲಿ ಕೊಳವೆಬಾವಿಗಳನ್ನು ಕೊರೆಯಿಸಾಲಾದ ಐದು ಹಳ್ಳಿಗಳ ಮತ್ತು 1995-96 ನೇ ಸಾಲಿನಲ್ಲಿ ಕೊಳವೆಬಾವಿಗಳನ್ನು ಕೊರೆಯಿಸಲಾದ 37 ಹಳ್ಳಿಗಳ ಪಟ್ಟಿ ಕೊಟ್ಟಿದ್ದು ಮಾಹಿತಿ ಸರಿಯಿರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ,

ಬೇಡಕಿಹಾಳ ಗ್ರಾಮದಲ್ಲಿ (4) ನನದಿವಾಡಿ ಗ್ರಾಮದಲ್ಲಿ (3) ಎಕ್ಕಂಬಾ ಗ್ರಾಮದಲ್ಲಿ (5) ಮತ್ತು ಕಲ್ಲೋಳ ಗ್ರಾಮದಲ್ಲಿ (3) ಕೊಳವೆಬಾವಿಗಳಂತೆ ಒಟ್ಟು ಹದಿನೆಂಟು ಬೋರ್ ವೆಲ್‌ಗಳನ್ನು ಐದು ಹಳ್ಳಿಗಳಲ್ಲಿ ಕೊರೆಯಿಸಿದ್ದು, ಪ್ರತಿಯೊಂದು ಹಳ್ಳಿಗೂ ಸರಿಸಮನಾದ ಸಂಖ್ಯೆಯಲ್ಲಿ ಕೊಳವೆಬಾವಿಗಳನ್ನು ಕೊರೆಯಿಸಿಲ್ಲ. ಆಲ್ಲದೇ, ಇಂತಿಂಥ ಊರುಗಳಿಗೆ ಕೊಳವೆಬಾವಿಗಳ ಅವಶ್ಯಕತೆಯಿರುವುದರಿಂದ ಕೊರೆಯಿಸಬೇಕೆಂದು ಈಗಾಗಲೇ ನಾನು ಸಂಬಂಧಪಟ್ಟ ಸಚಿವರಿಗೆ ಎರಡು-ಮೂರು ಪಟ್ಟಿಗಳನ್ನು ಕೊಟ್ಟಿದ್ದು, ಅದನ್ನು ಅವರು ಜಿಲ್ಲಾ ಪರಿಷತ್ತಿಗೆ ಕಳುಹಿಸಿದರೂ ಕೂಡ ಕೊಳವೆಬಾವಿ ಕೊರೆಸುವ ಬಗ್ಗೆ ಇನ್ನೂ ಕ್ರಮ ಕೈಗೊಂಡಿಲ್ಲ. ಇದಲ್ಲದೆ, ಹಿಂದುಳಿದ ಹಳ್ಳಿಗಳಿಗೂ ಕೂಡ ಕೊಳವೆಬಾವಿಗಳನ್ನು ಕೊರೆಯಿಸುವಂಥ ವ್ಯವಸ್ಥೆಯಾಗಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, 1995-96 ನೇ ಸಾಲಿನಲ್ಲಿ ಮಾನ್ಯ ಸದಸ್ಯರ ಮತ-ಕ್ಷೇತ್ರವಾದ ಸಡಲಗಾದಲ್ಲಿ 37 ಕೊಳವೆಬಾವಿಗಳನ್ನು ಕೊರೆಸಿದ್ದು, 1994-95 ರಲ್ಲಿ ಕೇವಲ ಐದು ಕೊಳವೆಬಾವಿಗಳನ್ನು ಮಾತ್ರ ಕೊರೆಯಿಸಲ್ಪಟ್ಟಿದೆ. ತಾವು ಪ್ರಸ್ತಾಪಿಸಿದಂತೆ ಶಾಮನೇವಾಡಿ ಹಾಗೂ ನನದಿವಾಡಿ, ಈ ಎರಡು ಊರುಗಳಲ್ಲಿ ಕೊಳವೆಬಾವಿಗಳನ್ನು ಕೊರೆಯಿಸಿದ್ದು, ಅವು ವಿಫಲವಾಗಿರುವ ಕಾರಣಕ್ಕಾಗಿ ಒಂದು ಸಂಯುಕ್ತ ಪುನಶ್ಚೇತನ ಯೋಜನೆ ಮಾಡಿ ಅದಕ್ಕಾಗಿ 1995-96 ನೇ ಸಾಲಿನಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ ಮತ್ತು ಕಾಮಗಾರಿಗಳನ್ನು ಕೈಗೊಳ್ಳಲು ಈಗ ಟೆಂಡರ್ ಕರೆದಿದ್ದು, ಟೆಂಡರ್ ಪ್ರಸ್ತಾವನೆ ಮುಗಿದ ನಂತರ ಸದರಿ ಕೆಲಸ-ಕಾರ್ಯಗಳನ್ನು ಪ್ರಾರಂಭಿಸುತ್ತೇವೆ. ಯಾವ್ಯಾವ ಗ್ರಾಮಗಳಲ್ಲಿ ಕೊಳವೆಬಾವಿಗಳ ಅವಶ್ಯಕತೆಯಿರುವ ಬಗ್ಗೆ ತಾವು ಪಟ್ಟಿಯನ್ನು ಕಳುಹಿಸಿದ್ದೀರೋ ಅದನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸುವುದಕ್ಕೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದ್ದು, ಒಂದು ವೇಳೆ ಅದು ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಯಾಗಿದಿದ್ದರೆ ಇಲ್ಲಿಂದ ಹೆಚ್ಚುವರಿಯಾಗಿ ಅದಕ್ಕೆ ಅನುದಾನ ಕೊಡುತ್ತೇನೆ.

ವಿಷಯ :- ಶಂಕರನಾರಾಯಣ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 205 (1518)

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಂಕರನಾರಾಯಣ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸ್ವಂತ ಕಟ್ಟಡ ರಚಿಸದಿರಲು ಕಾರಣವೇನು?

ಇ) ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?